# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಶಾಸನಬದ್ಧ ಸಹಕಾರಿ ಸಂಸ್ಥೆ**

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.

www.souharda.coop, Ph: 080-23378375-80, E-mail souharda@souharda.coop

**ಸಂಖ್ಯೆ : ಸಂಸ/ಶಿವಿ/ತ-7/1/2019-20** **ದಿನಾಂಕ: 18.10.2019**

**ಇವರಿಗೆ:**

ಮುಖ್ಯಕಾರ್ಯನಿರ್ವಾಹಕರು/ಹಿರಿಯ ಅಧಿಕಾರಿಗಳು/ಕ್ರೆಡಿಟ್ ಅಧಿಕಾರಿಗಳು

ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳು

**ಮಾನ್ಯರೇ,**

**ವಿಷಯ:** ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ/ ಹಿರಿಯ ಅಧಿಕಾರಿಗಳಿಗಾಗಿ ಹಾಗೂ ಕ್ರೆಡಿಟ್ ಅಧಿಕಾರಿಗಳಿಗಾಗಿ **"ಉನ್ನತ ಮಟ್ಟದ ತರಬೇತಿ"** ಕುರಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಶಾಸನಬದ್ಧವಾಗಿ ರಚನೆಗೊಂಡು, ಅರೆನ್ಯಾಯಿಕ ಅಧಿಕಾರ(Quasi Judicial)ವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿದೆ. ಈ ಕಾಯ್ದೆಯಡಿಯಲ್ಲಿ 18 ಪಟ್ಟಣ ಸಹಕಾರ ಬಾಂಕುಗಳು ಸೇರಿದಂತೆ 4750 ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಒಂದು ಹೊಸ ಚೈತನ್ಯವನ್ನು ನೀಡಿರುವ ಕ್ಷೇತ್ರ ಇದಾಗಿದೆ. ಈ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಸಹಕಾರ ಕ್ಷೇತ್ರದಲ್ಲಿ ಕ್ರಿಯಾಶೀಲ ಉತ್ತಮ ಮುಖ್ಯಕಾರ್ಯನಿರ್ವಾಹಕನಾಗಿ/ಹಿರಿಯಅಧಿಕಾರಿಯಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿದ್ಯಮಾನ ಮಾಹಿತಿಯನ್ನು ಒದಗಿಸುವ ಉದ್ದೇಶದಿಂದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ, ಹಿರಿಯ ಅಧಿಕಾರಿಗಳಿಗಾಗಿ ದಿನಾಂಕ 7 ಹಾಗೂ 8ನೇ ನವೆಂಬರ್2019ರಂದು **ಅಂಕಿತ ವಿಸ್ತಾ ಗ್ರೀನ್ ವಿಲೇಜ್, ನೆಲಮಂಗಲ, ಬೆಂಗಳೂರು** ಇಲ್ಲಿ **"ಉನ್ನತ ಮಟ್ಟದ ತರಬೇತಿ"**ಯನ್ನು ಆಯೋಜಿಸಲು ಉದ್ದೇಶಿಸಿದೆ. ಪ್ರತಿನಿಧಿಗಳು ದಿನಾಂಕ 7ನೇ ನವೆಂಬರ್ 2019ರಂದು ಬೆಳಿಗ್ಗೆ 11.00ಕ್ಕೆ ಶಿಭಿರದ ಸ್ಥಳದಲ್ಲಿ ಹಾಜರಿರಲು ಕೋರಿದೆ.

ತರಬೇತಿಯಲ್ಲಿ ಒಂದು ಬ್ಯಾಂಕಿನಿಂದ ಕನಿಷ್ಟ 2 ಜನ, ಗರಿಷ್ಠ 3 ಜನ ಭಾಗವಹಿಸಲು ಅವಕಾಶ ಇರುತ್ತದೆ, ತಮ್ಮ ಭಾಗವಹಿಸುವಿಕೆಯನ್ನು ಲಗತ್ತಿಸಿದ ನಮೂನೆಯಲ್ಲಿ ಭರ್ತಿ ಮಾಡಿ ದಿನಾಂಕ 30.10.2019 ಒಳಗೆ ಕಳುಹಿಸಲು ಹಾಗೂ ಈ ಕಾರ್ಯಕ್ರಮದಲ್ಲಿ ತಾವುಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಲು ಕೋರಿದೆ. **ಸದರಿ ತರಬೇತಿಯಲ್ಲಿ ಅಳವಡಿಸಬಹುದಾದ ವಿಷಯಗಳನ್ನು ಹಾಗೂ ಸಂಪನ್ಮೂಲ ವ್ಯಕ್ತಿಗಳನ್ನು, ದಿನಾಂಕ 25.10.2019ರ ಒಳಗಾಗಿ kssfcltrg@souharda.coop ಇ- ಮೇಲ್‌ಗೆ ಕಳುಹಿಸಲು ಕೋರಿದೆ.**

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ

(ಶರಣಗೌಡ ಜಿ. ಪಾಟೀಲ್)
ವ್ಯವಸ್ಥಾಪಕ ನಿರ್ದೇಶಕರು

Karnataka State Souharda Federal Cooperative Ltd. Bangalore
Reg. No. RSR / SOU / ACT / 136 / Regn 051 / 2001-02 dated 04-01-2002

**ಲಗತ್ತು :** ಅರ್ಜಿ ನಮೂನೆ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,


**ಶಾಸನಬದ್ಧ ಸಹಕಾರಿ ಸಂಸ್ಥೆ**

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.

www.souharda.coop, Ph: 080-23378375-80, E-mail souharda@souharda.coop


**ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ/ಹಿರಿಯ ಅಧಿಕಾರಿಗಳಿಗಾಗಿ**

**ಉನ್ನತ ಮಟ್ಟದ ತರಬೇತಿಯ ಅರ್ಜಿ ನಮೂನೆ**

ಬ್ಯಾಂಕಿನ ಹೆಸರು :

ಬ್ಯಾಂಕಿನ ವಿಳಾಸ :

ದೂರವಾಣಿ ಸಂಖ್ಯೆ :

ಸಂಯುಕ್ತ ಸಹಕಾರಿಯ ಸದಸ್ಯತ್ವ ಸಂಖ್ಯೆ :

**ಭಾಗವಹಿಸುವ ಪ್ರತಿನಿಧಿಯ ವಿವರ**

- ಹೆಸರು :
- ವಿಳಾಸ :
- ದೂರವಾಣಿ ಸಂಖ್ಯೆ :
- ಇ ಮೇಲ್ :
- ಹುದ್ದೆ :
- ಜನ್ಮ ದಿನಾಂಕ :
- ವಿದ್ಯಾರ್ಹತೆ :
- ಅನುಭವ :

- ತರಬೇತಿ ಪಡೆಯಲಿಚ್ಛಿಸುವ ವಿಷಯಗಳು & ಸಂಪನ್ಮೂಲ ವ್ಯಕ್ತಿಗಳ ಹೆಸರುಗಳು :

ಸಂಯುಕ್ತ ಸಹಕಾರಿಯು ಆಯೋಜಿಸಿರುವ 02 ದಿನಗಳ ಉನ್ನತ ಮಟ್ಟದ ತರಬೇತಿಯಲ್ಲಿ ಭಾಗವಹಿಸಲು ಇಚ್ಛಿಸಿರುತ್ತೇನೆ ಹಾಗೂ ತರಬೇತಿ ನಿಯಮಗಳಿಗೆ ಬದ್ಧನಾಗಿರುತ್ತೇನೆ.

**ಭಾಗವಹಿಸುವ ಪ್ರತಿನಿಧಿಯ ಸಹಿ**

ಮೇಲ್ಕಂಡಂತೆ ವಿವರವನ್ನು ಹೊಂದಿರುವ ನಮ್ಮ ಸಹಕಾರಿಯ ಪ್ರತಿನಿಧಿಗೆ ತರಬೇತಿಯಲ್ಲಿ ಭಾಗವಹಿಸಲು ಅವಕಾಶ ನೀಡಲು ಕೋರಿದೆ.

**ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು**

**ಸಹಕಾರಿಯ ಮೊಹರು** ------------------ **ಸಹಕಾರಿ ನಿ.,**